# ಆ್ಯಪಲ್ 'ಸಿರಿ'ಗನ್ನಡ

ಆ್ಯಪಲ್ ಕಂಪನಿಯು ಬಹುನಿರೀಕ್ಷಿತ ಐಫೋನ್ 16 ಸರಣಿಯ ಸ್ಮಾರ್ಟ್‌ಫೋನ್‌ಗಳನ್ನು ಈಚೆಗೆ ಬಿಡುಗಡೆ ಮಾಡಿದೆ. ಇದರೊಂದಿಗೆ 'ಐಒಎಸ್ 18' ಕಾರ್ಯಾಚರಣಾ ವ್ಯವಸ್ಥೆಯು ಬಳಕೆದಾರರಿಗೆ ಲಭ್ಯವಾಗಲಿದೆ.

ಐಒಎಸ್ 18 ಆ್ಯಪಲ್ ಕಂಪನಿಯ ಅಡ್ವಾನ್ಸ್ಡ್ ಆಪರೇಟಿಂಗ್ ಸಿಸ್ಟಂ ಆಗಿದೆ. ಈ ಆವೃತ್ತಿಯಲ್ಲಿ ಭಾರತೀಯ ಮಾರುಕಟ್ಟೆಗೆ ಅನುಗುಣವಾಗಿ, ಪ್ರಾದೇಶಿಕ ಭಾಷಾ ಅಸ್ಮಿತೆಗೆ ತಕ್ಕಂತೆ ಕೆಲವು ಮಹತ್ತರ ಬದಲಾವಣೆಗಳನ್ನು ಒದಗಿಸಲಿದ್ದು, ಕನ್ನಡಕ್ಕೆ ಹಿಂದೆಂದಿಗಿಂತಲೂ ಹೆಚ್ಚಿನ ಆದ್ಯತೆ ನೀಡಲಾಗಿದೆ. ಹೊಸ ಸವಲತ್ತು ಐಫೋನ್ 16 ಸರಣಿಯ ಫೋನ್‌ಗಳ ಜೊತೆಗೆ ದೊರೆಯಲಿದ್ದು, ಇದಕ್ಕಾಗಿ 'ಸಿರಿ 9' ಪರಿಚಯಿಸಲಾಗಿದೆ.

'ಸಿರಿ 9' ಭಾರತೀಯ ಭಾಷೆಗಳಿಗೆ ಮತ್ತು ಭಾರತದಲ್ಲಿ ಬಳಸುವ ಇಂಗ್ಲಿಷ್ ಭಾಷೆಯೊಂದಿಗೆ ಮುಕ್ತವಾಗಿ ವ್ಯವಹರಿಸುತ್ತದೆ. ಈ ಆವೃತ್ತಿ ಬಿಡುಗಡೆಗೊಂಡ ಬಳಿಕ ಬಳಕೆದಾರರು ಸಿರಿಯನ್ನು ಸ್ಥಳೀಯ ಭಾಷೆಯೊಂದಿಗೆ ಬೆರೆಸಿದ ಇಂಗ್ಲಿಷ್ ಬಳಸಿ, ಕಾಲ್ ಮಾಡಲು, ಅಲಾರಂ ಸೆಟ್ ಮಾಡಲು ಮತ್ತು ಟೈಮರ್ ಹೊಂದಿಸಲು, ಅಪ್ಲಿಕೇಷನ್ ತೆರೆಯಲು,



ಸಂಗೀತ ಪ್ಲೇ ಮಾಡಲು ಅಥವಾ ಹವಾಮಾನ ಪರಿಶೀಲಿಸುವುದು ಸೇರಿದಂತೆ ಇನ್ನಿತರ ವಿಚಾರಗಳ ಬಗ್ಗೆ ಬಳಸಬಹುದು. ಬಳಕೆದಾರರು ಇಂಗ್ಲಿಷ್ ಅನ್ನು ಬೆಂಗಾಲಿ, ಗುಜರಾತಿ, ಹಿಂದಿ, ಕನ್ನಡ, ಮಲೆಯಾಳಂ, ಮರಾಠಿ, ಪಂಜಾಬಿ, ತಮಿಳು ಮತ್ತು ತೆಲುಗುಗಳೊಂದಿಗೆ ಮಿಕ್ಸ್ ಮಾಡಿಯೂ ಸಿರಿಯೊಂದಿಗೆ ಸಂಪರ್ಕ ಹೊಂದಬಹುದು. ಉದಾಹರಣೆಗೆ, 'ಹಾಯ್ ಸಿರಿ, ರೋಹಿತ್‌ಗೆ ಕಾಲ್ ಮಾಡು' ಎಂದು ಕನ್ನಡ, ಇಂಗ್ಲಿಷ್‌ನಲ್ಲಿ ಹೇಳಿದರೆ, ಅದು ಅವರಿಗೆ ಕರೆ ಮಾಡುತ್ತೆ. ಬಳಕೆಯಲ್ಲಿರುವ ಸಿರಿಯು ದೇಶದಲ್ಲಿ ಹಿಂದಿ ಭಾಷೆಯೊಂದಿಗೆ ಮಾತ್ರ ವ್ಯವಹರಿಸುತ್ತದೆ.

## ಮೆಟಾ ಎಐ ವಾಯ್ಸ್

ಮೆಟಾ ಎಐ ಬಳಸುತ್ತಿರುವ ವಾಟ್ಸ್‌ಆ್ಯಪ್ ಬಳಕೆದಾರರಿಗೆ 'ಮೆಟಾ ಎಐ ವಾಯ್ಸ್' ಶೀಘ್ರ ಲಭ್ಯವಾಗಲಿದೆ. ವಾಟ್ಸ್‌ಆ್ಯಪ್‌ನಲ್ಲೀಗ ಮೆಟಾ ಎಐ ಆವೃತ್ತಿಯಷ್ಟೇ ಲಭ್ಯವಿದ್ದು, ಟೆಕ್ಸ್ಟ್ ಮೂಲಕ ಕಮಾಂಡ್ ಕೊಟ್ಟಲ್ಲಿ ಮಾತ್ರ ಇದು ಪ್ರತಿಕ್ರಿಯಿಸುತ್ತದೆ.

'ಮೆಟಾ ಎಐ ವಾಯ್ಸ್' ಅಭಿವೃದ್ಧಿಯಲ್ಲಿ ವಾಟ್ಸ್‌ಆ್ಯಪ್ ತೊಡಗಿದೆ. ಯುಕೆ, ಯುಎಸ್ ಇಂಗ್ಲಿಷ್ ಸೇರಿದಂತೆ ಹಲವಾರು ಉಚ್ಚಾರಣೆಯನ್ನು ಆಯ್ಕೆ ಮಾಡುವ ಅವಕಾಶವೂ ಇದರಲ್ಲಿರಲಿದೆ. ಜೊತೆಗೆ ಜನಪ್ರಿಯ ವ್ಯಕ್ತಿಗಳ ಧ್ವನಿ ಮಾದರಿಯಲ್ಲಿ ಇದು ಸ್ಪಂದಿಸಲಿದೆ.

ಓಪನ್ ಎಐನ 'ಚಾಟ್‌ಜಿಪಿಟಿ'ಯಂತೆಯೇ 'ಮೆಟಾ ಎಐ ವಾಯ್ಸ್' ಇರಲಿದ್ದು, ಹಲವಾರು ಫೀಚರ್‌ಗಳನ್ನು ಒಳಗೊಳ್ಳಲಿದೆ. ವಿವಾದಾತ್ಮಕ ಮಾಹಿತಿ ಒದಗಿಸುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ವಾಟ್ಸ್‌ಆ್ಯಪ್‌ನ ಮೆಟಾ ಎಐ ತೊಡಗಲಿದೆ. ಈಚೆಗಷ್ಟೇ ತನ್ನ ಚಾಟ್‌ಬಾಟ್‌ಗೆ ವಾಟ್ಸ್‌ಆ್ಯಪ್, ಮೆಟಾ ಎಐ ಪರಿಚಯಿಸಿದ್ದು, ಇದರಿಂದ ಸುಲಭವಾಗಿ ಪ್ರಶ್ನೆಗಳಿಗೆ ಉತ್ತರ ಪಡೆಯಬಹುದು, ಚಿತ್ರಗಳನ್ನು ರಚಿಸಬಹುದು, ಆಸಕ್ತಿದಾಯಕ ಪಾಕ ವಿಧಾನಗಳು ಮತ್ತು ಹಲವಾರು ವಿಷಯಗಳ ಬಗ್ಗೆ ಮಾಹಿತಿ ಪಡೆಯಬಹುದಾಗಿದೆ.

## ಇನ್‌ಸ್ಟಾಗೆ ಹೊಸ ಫೀಡ್

ಇನ್‌ಸ್ಟಾಗ್ರಾಂ ಈ ಬಾರಿ ತನ್ನ ಯೂಸರ್ ಇಂಟರ್‌ಫೇಸ್ (ಯುಐ) ಮೇಲೆ ಹೊಸ ಪ್ರಯೋಗಕ್ಕೆ ಮುಂದಾಗಿದ್ದು, ಪ್ಲಾಟ್‌ಫಾರ್ಮ್‌ನ ಪ್ರಮುಖ ಪ್ರೊಫೈಲ್ ಗ್ರಿಡ್‌ಗೆ ಬದಲಾವಣೆ ತರುವ ನಿಟ್ಟಿನಲ್ಲಿ ತೊಡಗಿಕೊಂಡಿದೆ. ಈ ಮೂಲಕ ಇನ್‌ಸ್ಟಾ ಫೀಡ್‌ಗೆ ಹೊಸ ಸ್ವರೂಪ ಸಿಗಲಿದೆ ಎಂದಿದೆ ಕಂಪನಿ.

ಹೊಸ ಬದಲಾವಣೆಯಲ್ಲಿ ಬಳಕೆದಾರರನ್ನು ತೊಡಗಿಸಿಕೊಳ್ಳಲಿರುವ ಇನ್‌ಸ್ಟಾಗ್ರಾಂ, ಅವರ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟೇ ಮುಂದುವರೆಯುವುದಾಗಿ ಹೇಳಿದೆ. ಇನ್‌ಸ್ಟಾಗ್ರಾಂ ಹೊಸ ವರ್ಟಿಕಲ್ ಗ್ರಿಡ್ ಪರೀಕ್ಷಿಸುತ್ತಿದ್ದು, ಇದಿನ್ನೂ ಪ್ರಾಯೋಗಿಕ ಹಂತದಲ್ಲಿದೆ. ಈ ಹೊಸ ಲೇಔಟ್ ಕುರಿತು ಬಳಕೆದಾರರ ಅಭಿಪ್ರಾಯ, ಅನಿಸಿಕೆಗಳನ್ನು ಆಲಿಸಿದ ನಂತರವೇ ಬದಲಾವಣೆಗಳನ್ನು ಆ್ಯಪ್‌ಗೆ ಅಪ್‌ಡೇಟ್ ಮಾಡಲಿದ್ದೇವೆ ಎಂದು ಆ್ಯಪ್‌ನ ಸಿಇಒ ಆ್ಯಡಮ್ ಮೊಸ್ಸೆರಿ ಹೇಳಿದ್ದಾರೆ.

## ಮಾಯಾ ಕ್ಯಾಮೆರಾ

ಗೂಗಲ್ ಈಚೆಗೆ 'ಪಿಕ್ಸೆಲ್ 9' ಸರಣಿಯ ಸ್ಮಾರ್ಟ್‌ಫೋನ್‌ಗಳನ್ನು ಬಿಡುಗಡೆ ಮಾಡಿದೆ. ಈ ಸರಣಿಯ ಫೋನ್‌ಗಳಲ್ಲಿನ ಕ್ಯಾಮೆರಾ ಫೀಚರ್ ಎಲ್ಲರ ಆಕರ್ಷಣೆ ಗಿಟ್ಟಿಸಿದೆ. ಸಭೆ–ಸಮಾರಂಭಗಳಲ್ಲಿ, ಔಟಿಂಗ್ಸ್ ವೇಳೆ ಸೆಲ್ಫಿ ಅಥವಾ ಫೋಟೊ ಕ್ಲಿಕ್ಕಿಸುವುದು ಸಹಜ. ಫೋಟೊ ಕ್ಲಿಕ್ಕಿಸುವಾಗ ಯಾರಾದರೊಬ್ಬರು ತಪ್ಪಿಸಿಕೊಳ್ಳುವುದು ಅಷ್ಟೇ ಸಹಜ. ಹೀಗೆ ಫೋಟೊಗೆ ಮಿಸ್ಸಾದವರು ನಂತರ ಆ ಫೋಟೊ ನೋಡಿ, ಆ ಫೋಟೊದಲ್ಲಿ ನಾನಿಲ್ಲವಲ್ಲ ಎಂದು ಕೈಕೈ ಹಿಸುಕಿಕೊಳ್ಳುತ್ತಾರೆ. ಇಂತಹ ಪರಿಸ್ಥಿತಿಯನ್ನು ತಂತ್ರಜ್ಞಾನದ ಮೂಲಕ ಸರಿದೂಗಿಸಲು ಪಿಕ್ಸೆಲ್ 9 'ಬಿ ಇನ್ ಪಿಕ್ಚರ್' ಎಂಬ ಫೀಚರ್ ಪರಿಚಯಿಸಿದೆ.







ಮೂವರು ಸ್ನೇಹಿತರು ಒಂದು ಜಾಗಕ್ಕೆ ಭೇಟಿ ಕೊಟ್ಟಿರುತ್ತಾರೆ ಎಂದಿಟ್ಟುಕೊಳ್ಳಿ. ಆ ಮೂವರನ್ನು ಒಟ್ಟಿಗೆ ಫೋಟೊ ತೆಗೆಯಲು ಆ ಸ್ಥಳದಲ್ಲಿ ಬೇರೆ ಯಾರೂ ಇಲ್ಲದಿದ್ದಾಗ ಈ ಫೀಚರ್ ಕೆಲಸಕ್ಕೆ ಬರುತ್ತದೆ. ಮೂವರ ಪೈಕಿ ಇಬ್ಬರನ್ನು ಮೊದಲಿಗೆ ಒಂದೇ ಫ್ರೇಮ್‌ನಲ್ಲಿ ಫೋಟೊ ತೆಗೆಯಬೇಕು. ನಂತರ ಆ ಫೋಟೊವನ್ನು 'ಬಿ ಇನ್ ಪಿಕ್ಚರ್'ನಲ್ಲಿ ತೆರೆದರೆ, ಈಗಾಗಲೇ ತೆಗೆದ ಫೋಟೊದ ಜೊತೆಗೆ ಕ್ಯಾಮೆರಾ ಆನ್ ಆಗುತ್ತದೆ. ಕ್ಯಾಮೆರಾದ ಆ ಫ್ರೇಮ್‌ನಲ್ಲಿ ಮತ್ತೊಬ್ಬ ಹೋಗಿ ನಿಂತು ಫೋಟೊ ಕ್ಲಿಕ್ಕಿಸಿದರೆ ಮೂವರೂ ಒಟ್ಟಿಗೆ ಫೋಟೊ ತೆಗೆಸಿಕೊಂಡಂತೆ ಚಿತ್ರ ರಚನೆಯಾಗುತ್ತದೆ.